1.ತತ್ತತ ಧಿಮಿತ ಧಿಮಿಕಿ ಎನುತ ಹರಿಯಾಡಿದನೇ

ಚಿತ್ತಜಪಿತ ಉತ್ತಮ ಮುತ್ತಿನ ಗೊತ್ತುಗಳ್ ಕುತ್ತಿಗೆಯೊಳಗೆತ್ತಾಡುತ ||

ಹಾರಪದಕ ಕೇಯೂರ ಕಿರೀಟ

ಧೀರ ಭಾಪುರಿ ಯದುವೀರ ಹೊಳೆಯುತಿರೆ

ಮಾರಜನಕ ಸುಕುಮಾರ

ಸಾರಗುಣಸಾಂದ್ರ ಮಹಿಮ ಹರಿ ||೧||

ಮಂದಗಮನೆಯರು  ವೃಂದ

ವೃಂದದಲಿ  ಚಂದ  ನೋಡುತಿರೆ

ಆನಂದಗೋಪನ  ಕಂದ  ಮುಕುಂದ

ನಿತ್ಯಾನಂದ  ಹರೇ  ॥೨॥

ಕಂಕಣ ವಂಕಿಯು ಕಿಂಕಿಣಿ ರವಗಳು

ಶಂಖಚಕ್ರ ದಿವ್ಯ ಪಂಕಜಮಾಲೆಯು

ಶಂಖಧರ ಶ್ರೀ ಪುರಂದರ ವಿಠ್ಠಲ

ವೇದಾಂತವೇದ್ಯ ಶ್ರೀಕೃಷ್ಣ ||೨||

2.ನಿತ್ಯೋತ್ಸವ

- ಕೆ. ಎಸ್. ನಿಸಾರ್ ಅಹಮದ್

ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ,

ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ,

ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ

ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ...

ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ,

ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ,

ಓಲೆ ಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ

ನಿತ್ಯೋತ್ಸವ ತಾಯಿ, ನಿತ್ಯೋತ್ಸವ ನಿನಗೆ....

ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ,

ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೆ,

ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ

ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ

3.ಗಾಯನವ ಮಾಡೋ ಗಣನಾಥನ ।। ಗಾಯನವ ಮಾಡೋ ವರಗಳ ಬೇಡೋ||

ಆದಿಗೆ ಪೂಜೆಗೆ ಆಖರ ನೀತನು ಸಾಧನ ಸಂಪದಕ್ಕೆ ಸುಮನವ ನೀವ |

ಮೂಷಿಕ ವಾಹನ ಲಂಬೋದರ ಶಕ್ತ, ಪಾಶಾಂಕುಶ ಧರ ಮೋದಕ ಹಸ್ತ ।।

ಭವಸಂಭವ ಸುರವರ ನೀತ, ಭಾವಜನಯ್ಯನ ಅತಿ ಪ್ರೀತ ।

ಸುರಋಷಿ ನರರಿಗೆ ಒಲಿದಾತ, ನಿರುತ ವೆಂಕಟ ವಿಠಲನ ದೂತ ।।

4.ಪಾಲಿಸಮ್ಮ ಮುದ್ದು ಶಾರದೆ |

ಎನ್ನ ನಾಲಿಗೆಯಲಿ ನಿಲ್ಲ ಬಾರದೆ ||

ಲೋಲಲೋಚನೆ ತಾಯಿ ನಿರುತ ನಂಬಿದೆ ನಿನ್ನ ||ಅಪ|| ಅಕ್ಷರಕ್ಷರ ವಿವೇಕವ | ನಿನ್ನ |

ಕುಕ್ಷಿಯೊಳೀರೇಳು ಲೋಕವ || ಸಾಕ್ಷತ್ ರೂಪದಿಂದ ಒಲಿದು ರಕ್ಷಿಸು ತಾಯೇ ||೧||

ಶೃಂಗಾರಪುರ ನೆಲೆವಾಸಿನೀ ದೇವೀ | ಸಂಗೀತ ಗಾನ ವಿಲಾಸಿನಿ || ಮಂಗಳ ಗಾತ್ರಳೆ ಭಳಿರೆ ಬ್ರಹ್ಮನ ರಾಣಿ ||೨||

ಸರ್ವಾಲಂಕಾರ ದಯಾಮೂರುತಿ ನಿನ್ನ ಚರಣವ ಸ್ತುತಿಸುವೆ ಕೀರುತಿ | ಗುರುಮೂರ್ತಿ ಪುರಂದರವಿಠಲನ್ನ ಸ್ತುತಿಸುವೆ ||೩||

5.ಅರಳುವ ಹೂವುಗಳೇ..

ಆಲಿಸಿರಿ..

ಬಾ..ಳೊಂದು ಹೋರಾ..ಟ

ಮರೆಯದಿರಿ...

ಅರಳುವ ಹೂವುಗಳೇ.. ಆಲಿಸಿರಿ

ಬಾಳೊಂದು ಹೋರಾ..ಟ

ಮರೆಯದಿರಿ..

ಬೆಳಗಿನ ಕಿರಣಗಳೇ.. ಬಣ್ಣಿಸಿರಿ

ಇರುಳ್ಳಿಂದೆ ಬೆಳಕುಂಟು ತೋರಿಸಿರಿ

ನಾಳೆಯ ನಂಬಿಕೆಯಿರಲಿ

ನಮ್ಮ ಬಾಳಲಿ..

ಗೆಲ್ಲುವ ಭರವಸೆಯೊಂದೇ

ಬೆಳಕಾಗಲಿ..

ಮನವೇ ಓ ಮನವೇ

ನೀ ಅಳುಕದಿರು..ಉ

ಮಳೆಯೋ ಬರಸಿಡಿಲೋ

ನೀ ನಡೆಯುತಿರು...

ಮನಸು ಎಂಬ ಕನ್ನಡಿಯು

ಒಡೆದು ಹೋಗಬಾರದು..ಉ

ಬಾಳು ಒಂದು ಗೋಳು ಅಂತಾ

ಓಡಿ ಹೋಗಬಾರದು

ಯಾರಿಗಿಲ್ಲಿ ನೋವಿಲ್ಲಾ

ಯಾರಿಗಿಲ್ಲಿ ಸಾವಿಲ್ಲಾ..ಆಆ

ಕಾಲಕಳೆದ ಹಾ..ಗೆ ಎಲ್ಲಾ

ಮಾಯವಾಗುವಂತದು

ಉಳಿಪೆಟ್ಟು ಬೀಳುವ ಕಲ್ಲೇ

ಶಿಲೆಯಾಗಿ ನಿಲ್ಲುವುದು

ದಿನನೋವ ನುಂಗುವ ಜೀವವೇ

ನೆಲೆಯಾ..ಗಿ ನಿಲ್ಲುವುದು

ಯಾರಿಗಿಲ್ಲ ಅಲೆದಾಟ

ಯಾರಿಗಿಲ್ಲ ಪರದಾಟ

ನಮ್ಮ ಪ್ರತಿ ಕನಸು

ಇಲ್ಲಿ ನನಸಾಗೋ

ಒಳ್ಳೇ ಕಾಲವು ಮುಂದೆ ಇದೆ..

ಮನವೇ ಓ ಮನವೇ..

ನೀ ಕುಗ್ಗದಿರು..ಉ

ಬೆಟ್ಟಾ ಬಯಲಿರಲಿ..

ನೀ ನುಗ್ಗುತಿರು..

ಅರಳುವ ಹೂವುಗಳೇ ಆಲಿಸಿರಿ..

ಬಾಳೊಂದು ಹೋರಾಟ

ಮರೆಯದಿರಿ..ಈಈಈ

ನೋವು ನಲಿವು ಅನ್ನೋದು..

ಬಾಳ ರೈಲು ಕಂಬಿಗಳು..ಉಉ

ನಡುವೆ ನಮ…

ಅರಳುವ ಹೂವುಗಳೇ..

ಆಲಿಸಿರಿ..

ಬಾ..ಳೊಂದು ಹೋರಾ..ಟ

ಮರೆಯದಿರಿ...

ಅರಳುವ ಹೂವುಗಳೇ.. ಆಲಿಸಿರಿ

ಬಾಳೊಂದು ಹೋರಾ..ಟ

ಮರೆಯದಿರಿ..

ಬೆಳಗಿನ ಕಿರಣಗಳೇ.. ಬಣ್ಣಿಸಿರಿ

ಇರುಳ್ಳಿಂದೆ ಬೆಳಕುಂಟು ತೋರಿಸಿರಿ

ನಾಳೆಯ ನಂಬಿಕೆಯಿರಲಿ

ನಮ್ಮ ಬಾಳಲಿ..

ಗೆಲ್ಲುವ ಭರವಸೆಯೊಂದೇ

ಬೆಳಕಾಗಲಿ..

ಮನವೇ ಓ ಮನವೇ

ನೀ ಅಳುಕದಿರು..ಉ

ಮಳೆಯೋ ಬರಸಿಡಿಲೋ

ನೀ ನಡೆಯುತಿರು...

ಮನಸು ಎಂಬ ಕನ್ನಡಿಯು

ಒಡೆದು ಹೋಗಬಾರದು..ಉ

ಬಾಳು ಒಂದು ಗೋಳು ಅಂತಾ

ಓಡಿ ಹೋಗಬಾರದು

ಯಾರಿಗಿಲ್ಲಿ ನೋವಿಲ್ಲಾ

ಯಾರಿಗಿಲ್ಲಿ ಸಾವಿಲ್ಲಾ..ಆಆ

ಕಾಲಕಳೆದ ಹಾ..ಗೆ ಎಲ್ಲಾ

ಮಾಯವಾಗುವಂತದು

ಉಳಿಪೆಟ್ಟು ಬೀಳುವ ಕಲ್ಲೇ

ಶಿಲೆಯಾಗಿ ನಿಲ್ಲುವುದು

ದಿನನೋವ ನುಂಗುವ ಜೀವವೇ

ನೆಲೆಯಾ..ಗಿ ನಿಲ್ಲುವುದು

ಯಾರಿಗಿಲ್ಲ ಅಲೆದಾಟ

ಯಾರಿಗಿಲ್ಲ ಪರದಾಟ

ನಮ್ಮ ಪ್ರತಿ ಕನಸು

ಇಲ್ಲಿ ನನಸಾಗೋ

ಒಳ್ಳೇ ಕಾಲವು ಮುಂದೆ ಇದೆ..

ಮನವೇ ಓ ಮನವೇ..

ನೀ ಕುಗ್ಗದಿರು..ಉ

ಬೆಟ್ಟಾ ಬಯಲಿರಲಿ..
ನೀ ನುಗ್ಗುತ್ತಿರು..
ಅರಳುವ ಹೂವುಗಳೇ ಆಲಿಸಿರಿ..
ಬಾಳೊಂದು ಹೋರಾಟ
ಮರೆಯದಿರಿ..ಈಈಈ

ನೋವು ನಲಿವು ಅನ್ನೋದು..
ಬಾಳ ರೈಲು ಕಂಬಿಗಳು..ಉಉ
ನಡುವೆ ನಮ…

6.ಈ ಭೂಮಿ ಬಣ್ಣದ ಬುಗುರಿ
ಆ ಶಿವನೇ ಚಾಟಿ ಕಣೋ
ಈ ಬಾಳು ಸುಂದರ ನಗರಿ
ನೀನಿದರ ಮೇಟಿ ಕಣೋ
ಮರಿಬೇಡ ತಾಯಿಯ ಋಣವ
ಮರಿಬೇಡ ತಂದೆಯ ಒಲವ
ಹಡೆದವರೇ ದೈವ ಕಣೋ
ಸುಖವಾದ ಬಾಷೆಯ ಕಲಿಸೋ
ಸರಿಯಾದ ದಾರಿಗೆ ನೆಡೆಸೋ
ಸಂಸ್ಕೃತಿಯೇ ಗುರುವು ಕಣೋ
ಮರೆತಾಗ ಜೀವನ ಪಾಠ
ಕೊಡುತಾನೆ ಚಾಟಿಯ ಏಟ
ಕಾಲ ಕ್ಷಣಿಕ ಕಣೋ
ಈ ಭೂಮಿ ಬಣ್ಣದ ಬುಗುರಿ
ಆ ಶಿವನೇ ಚಾಟಿ ಕಣೋ
ಈ ಬಾಳು ಸುಂದರ ನಗರಿ
ನೀನಿದರ ಮೇಟಿ ಕಣೋ
ಮರಿಬೇಡ ಮಗುವಿನ ನಗುವ
ಕಳಿಬೇಡ ನಗುವಿನ ಸುಖವ
ಭರವಸೆಯೇ ಮಗುವು ಕಣೇ
ಕಳಬೇಡ ಕೊಲ್ಲಲು ಬೇಡ
ನೀ ಹಾಡು ಶಾಂತಿಯ ಹಾಡ
ಜೀವನವೇ ಪ್ರೀತಿ ಕಣೋ
ನಿಂತಾಗ ಬುಗುರಿಯ ಆಟ
ಎಲ್ಲಾರು ಒಂದೇ ಓಟ
ಕಾಲ ಕ್ಷಣಿಕ ಕಣೋ
ಈ ಭೂಮಿ ಬಣ್ಣದ ಬುಗುರಿ
ಆ ಶಿವನೇ ಚಾಟಿ ಕಣೋ
ಈ ಬಾಳು ಸುಂದರ ನಗರಿ
ನೀನಿದರ ಮೇಟಿ ಕಣೋ

7.ಸ ರಿ ಗ ಪ, ಗ ಪ ದ ಸ, ಪ ದ ಸ ರಿ ಗಾ
ಶಿಲೆಗಳು ಸಂಗೀತವಾ ಹಾಡಿವೆ
ಶಿಲೆಗಳು ಸಂಗೀತವಾ ಹಾಡಿವೆ
ಬೇಲೂರ ಗುಡಿಯಲ್ಲಿ ಕೇಶವ ನೆದುರಲ್ಲಿ
ಬೇಲೂರ ಗುಡಿಯಲ್ಲಿ ಕೇಶವ ನೆದುರಲ್ಲಿ
ಅನು ದಿನ ಅನು ಕ್ಷಣ ಕುಣಿಯುತಲೀ
ಶಿಲೆಗಳು ಸಂಗೀತವಾ ಹಾಡಿವೆ
ಕುಣಿಯುವ ಕಾಲ್ಗೆಜ್ಜೆ ಘಲ ಘಲ ಎನುವಂತೆ
ಅರಳಿದ ಕಣ್ಬೆಳಕು ಫಳ ಫಳ ಹೊಳೆದಂತೆ
ಕುಣಿಯುವ ಕಾಲ್ಗೆಜ್ಜೆ ಘಲ ಘಲ ಎನುವಂತೆ

ಅರಳಿದ ಕಣ್ಬೆಳಕು ಫಳ ಫಳ ಹೊಳೆದಂತೆ

ಆ ಶಿಲ್ಪಿಯಾ ಹೊಂಗನಸಿನಾ

ಸೌಂದರ್ಯದಾ ಕನ್ನಿಕೆಯರೂ

ಕರವಾ ಮುಗಿದೂ ಶರಣೂ ಯಂದೂ

ಭಕುತಿಯಲೀ ಶ್ರೀಹರಿಯಾ ಸ್ತುತಿಸುತ

ಸಂಗೀತವಾ ಹಾಡಿವೆ

ಶಿಲೆಗಳು ಸಂಗೀತವಾ ಹಾಡಿವೆ

ಶಿಲೆಗಳು ಸಂಗೀತವಾ ಶಿಲೆಗಳು
ಸಂಗೀತವಾ

ಶಿಲೆಗಳು ಸಂಗೀತವಾ ಹಾಡಿ

ಶಿಲೆಗಳು ಸಂಗೀತವಾ ಹಾಡಿವೆ

ಬೇಲೂರ ಗುಡಿಯಲ್ಲಿ ಕೇಶವ ನೆದುರಲ್ಲಿ

ಅನು ದಿನ ಅನು ಕ್ಷಣ ಕುಣಿಯುತಲೀ

ಶಿಲೆಗಳು ಸಂಗೀತವಾ ಹಾಡಿವೆ

ಶಿಲೆಯಲೇ ಕಲೆಯನ್ನು ಸೆರೆಹಿಡಿದಾ

ಗಾ ರಿ ಸಾ ದ ಪ ದ ಸಾ ದ ಪಾ ಗ ರಿ ಸ

ಸರಿಗರಿಸಾ ರೀ ರೀ ಗಪದಪಗಾ

ಗಾಗಾಗಾ ಪದಸದಪಾ

ಗ ರಿ ಸ ರಿ ಸ ದ ಪ ದ ಸಾ

ಶಿಲೆಯಲೇ ಕಲೆಯನ್ನು ಸೆರೆಹಿಡಿದಾ

ಕಲೆಯನು ಶಿಲೆಯಲ್ಲಿ ಅರಳಿಸ…

ಕನ್ನಡ ನಾಡಿನ ವೀರರಮಣಿಯ,

ಗಂಡು ಭೂಮಿಯ ವೀರ ನಾರಿಯ,

ಚರಿತೆಯ ನಾನು ಹಾಡುವೆ...

೮.ಹೊಸಿಲಲಿ ಬರೆದಿದೆ ಹೊಸ ಹಾರೈಕೆ

ಹೂ ಬಿಸಿಲಿನ ಚಿತ್ತಾರದಲಿ

ನಿಜವಾಗಿಸು ಬಾ ನವವರುಷವೆ ನೀ

ವಿಧ ವಿಧ ಪದ ವಿನ್ಯಾಸದಲಿ ॥

ಗಿಡ ಮರ ಬಳ್ಳಿಯ ಹೂ ಬಟ್ಟಲಲಿ

ಭೃಂಗದ ಊಟದ ತಟ್ಟೆಯಲಿ

ನಗುತಿದೆ ಚೆಲುವೆ ನಂದನದೊಲವೆ

ಪರಿಮಲವಾಡುವ ತೊಟ್ಟಿಲಲಿ ॥೧॥

ಅತಿಗಳಿಗೇರದ ಮಿತಿಗಳ ಮೀರದ

ಪಥಮೂಡಲಿ ಪ್ರತಿಬಾಳಿನಲಿ

ಹೊಸ ಸಂವತ್ಸರ ಹರಸಿದೆ ಬಾಳನು

ಕೃತಿಯಾಗುವ ಥರ ನಾಳಿನಲಿ ॥೨॥

೯.ಏನು ಬೇಡಲಿ ಗುರುವೆ ಜ್ಞಾನ ಭಿಕ್ಷೆಯ
ಹೊರತು ಜ್ಞಾನ ಯೋಗಾಶ್ರಮದ
ಸಿದ್ಧೇಶ್ವರ

ಜ್ಞಾನ ಸಂಪುಟ ಸಿರಿಯೇ ಜ್ಞಾನ ಗುಮ್ಮಟ
ಗಿರಿಯೇ
ಜ್ಞಾನಧಾರೆಯ ಹರಿಸು ಜ್ಞಾನೇಶ್ವರ

ಎದೆ ಹೊಲದ ಕಸವನ್ನು ಹಸನಾಗಿ
ಕಿತ್ತೆಸೆದು
ಹೊಸ ಮಳೆಯ ಹೊಸ ಕಳೆಯ ತರಿಸು
ಗುರುವೆ

ಜ್ಞಾನ ಬೀಜವ ಬಿತ್ತಿ ಜಾಣ ಬೆಳೆಯನು
ಬೆಳೆದು
ಜ್ಞಾನ ಬುತ್ತಿಯ ಬಿಚ್ಚಿ ಉಣಿಸು ಗುರುವೆ

ನಿತ್ಯ ಸತ್ಯದ ಪ್ರೀತಿ ಶೂನ್ಯ ತತ್ವದ ನೀತಿ
ನನ್ನೊಡಲ ತುಂಬೆಲ್ಲ ಸುರಿಸು ಗುರುವೆ
ಸನ್ನಡತೆ ಸಿರಿವಂತ ಮುನ್ನಡೆಸೊ
ಗುಣವಂತ
ಸನ್ನಿಧಿಯ ಸುಖದಲ್ಲಿ ಇರಿಸು ಗುರುವೆ

ಆತ್ಮ ಶಿಕ್ಷಣದೆಡೆಗೆ ಆತ್ಮ ತೃಪ್ತಿಯ ನಡಿಗೆ
ಆತ್ಮ ಸಾಕ್ಷಿಯ ಕಡೆಗೆ ಹರಸು ಗುರುವೆ
ಆತ್ಮ ಜ್ಞಾನದ ಬಂಧು ತತ್ವಜ್ಞಾನದ ಸಿಂಧು
ಆತ್ಮ ಉನ್ನತಿ ಕಡೆಗೆ ನಡೆಸು ಗುರುವೆ

## ೧೦.ಸಾಧನೆಗೆ ಶೋಧನೆ

ಸಾಧನೆಗೆ ಶೋಧನೆಯೆ ದಿವ್ಯ ದೀವಿಗೆಯು
ಆದಿಯಲಿ ವೋದದಲಿ ಅರಿ ಕಂಡ್ಯ
ಮನುಜ

ಕನಕರಿಸಿ ಬೇಸರಿಸಿ ಅನುಸರಿಸಿ ಬಂದೆ
ಅನುದಿನವು ಅನ್ನ ವಸನಕ್ಕಾಗಿ ಬೆಂದೆ
ದೀನನಂತೆಸಮಯ ವ್ಯಯಿಸಿ ಬಹು ನಿಂದೆ
ತಂತಾನೆ ಅರಿಯದ ಅಜ್ಞಾನಿ ಎನಿಸಿದೆ
॥೧॥

ಜೀವಾಂತರಾಳದಲಿ ಊರಿರುವ ಬೀಜವದು
ಭಾವಾಂತಃಕರಣಕ್ಕೆ ಕರ್ಮ ಭೂಮಿಕೆಯು।
ಸಾವಧಾನದಿ ಅರಿತು ಸುಜ್ಞಾನಿಗಳ ಸಂಗದೆ
ಕಾವಭಾರವನ್ನೊತ್ತು ಎರಕವನ್ನೊಯ್ಯು
॥೨॥

ತ್ಯಾಗಭೋಗಾದಿಗಳ ಅಂತರವ ತಿಳಿಬೇಕು
ಭಾಗ್ಯಬಡತನಗಳ ಉದಾಸಿಸಲು ಬೇಕು।
ಯೋಗಮಾರ್ಗದಲಿ ಸಹನ ಶಕ್ತಿಯ
ಬಿತ್ತಲು ಬೇಕು
ಚಿಗುರೊಡೆದ ಬೀಜವದು
ಹೆಮ್ಮರವಾಗಲಿಬೇಕು ॥೩॥

ಕಾಲವದು ನಿಲ್ಲದದು ನಿರಂತರವು
ಹೇಗೋ
ಚಲಿಸುತಿರು ದಿಶೆಯಲ್ಲಿ ಗುರಿಮುಟ್ಟುವ
ಹಾಗೋ।
ತಲ್ಲಣಿಸದಲೇ ಹೊಂದು
ಅಗಾಧನಭಧ್ವಾಂಗೊ
ಕಲ್ಪನೆಯ ಕನಸ
ಸಾಕಾರಗೊಳಿಸಿನ್ದೆಂಗೋ॥೪॥

ಸಮಭಾವ ಸಂಶಕ್ತಿ ಸಂಪೂರ್ಣ ಯುಕ್ತಿ
ಸಂಭಾವ್ಯಸಾಧನಕೆ ಸಮಾಕಾರ ದೀಪ್ತಿ
ಕ್ಷಮತೆಯರಿತು ಭೂಮಿ ಬೆಳಗಿಸಲಿ ಕೀರ್ತಿ
ಸಂಶೋಧನೆಯು ತರಲಿ ಭರತ
ಮಾತೆಯಲಿ ಭಕ್ತಿ॥೫॥ ಶ್ರೀ
ಕೃಷ್ಣಾರ್ಪಣಮಸ್ತು